**ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾವೇರಿ**

**ಎಸ್.ಎಸ್.ಪಿ.ಎನ್. ಸಂಯುಕ್ತ ಪದವಿ ಪೂರ್ವ ಕಾಲೇಜು, ಬ್ಯಾಡಗಿ. ಜಿಲ್ಲೆ : ಹಾವೇರಿ**

# ದ್ವಿತೀಯ ಪಿ.ಯು.ಸಿ. ಮೊದಲನೆಯ ಕಿರು ಪರೀಕ್ಷೆ ಸಪ್ಟಂಬರ – 2021

**ವಿಷಯದ ಸಂಕೇತ ಸಂಖ್ಯೆ : 16** **ವಿಷಯ : ಐಚ್ಛಿಕ ಕನ್ನಡ** **ಒಟ್ಟು ಪ್ರಶ್ನೆಗಳು : 32**

**ಸಮಯ : 1 ಗಂಟೆ 30 ನಿಮಿಷ** **ಒಟ್ಟು ಅಂಕಗಳು : 50**

---

## ‘ಅ’ ವಿಭಾಗ

**I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.** **1X5=5**

1. ಅಮರನರ್ತಕಿ ಯಾರು?
2. ಶಿವ ಅರ್ಜುನನನ್ನು ಪರೀಕ್ಷಿಸಲು ಯಾವ ವೇಷದಲ್ಲಿ ಬಂದನು?
3. ಊರಿಗೆಲ್ಲ ದೊಡ್ಡ ಸಂಭ್ರಮ ಯಾವುದು?
4. ನಾಗಿಯ ಎದೆಗೆ ಗಂಧಧೂಪವನ್ನು ಹಾಕಿದವರು ಯಾರು?
5. ಅರುಣೋದಯವು ಹೇಗೆ ಮೂಡುತ್ತಿತ್ತು?

## ‘ಆ’ ವಿಭಾಗ

**II. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **2X1=2**

6. ಸಂಗೀತ ಪ್ರಪಂಚಕ್ಕೆ ಯಾವ ಯಾವ ವಂಶದ ರಾಜರು ಹಾಜರಿದ್ದರು?
7. ಮರಳ ಲಿಂಗವನ್ನು ಅರ್ಜುನನು ಹೇಗೆ ಪೂಜಿಸಿದನು?

**III. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿರಿ.** **3X1=3**

8. ಸುರಕಾಮಿನಿ ರಂಗದೊಳ್ ಅದೃಶ್ಯಮಪ್ಪುದು.
9. ಒರ್ವನೆ ನಿಂದು ಕಾದಿದಯ್.

**IV. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ.** **4X1=4**

10. ನೀಲಾಂಜನೆ ನೃತ್ಯ ವಿಶೇಷತೆಯನ್ನು ವರ್ಣಿಸಿರಿ.
11. ಕಿರಾತನೆ ಸಾಕ್ಷಾತ್ ಶಿವನೆಂದಾಗ ಅರ್ಜುನನಲ್ಲಿ ಮೂಡಿದ ಭಾವನೆಗಳು ಯಾವುವು? ವಿವರಿಸಿರಿ.

**V. ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿರಿ.** **4X1=4**

12. ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ
ದೆನಿತೆನಿತಂ ಮಱುಗಿದುದಿ
ಲ್ಲನಂತಸಂಸಾರಗಹನದೊಳ್ ಜೀವಂಗಳ್

13. ಒಕ್ಕುದು ನೆತ್ತರ್ ಬಾಯಿಂ
ಮಿಕ್ಕಲರ್ದುಸಿರಿಡುವ ಮೂಗಿನೆರಡುಂ ಕಡೆಯಿಂ
ದಕ್ಕಟ ತಪ್ಪಾಯ್ತೆನುತಂ
ಮುಕ್ಕಣ್ಣಂ ಮಱುಗಿ ಮನದೆ ಸಿಡಿಮಿಡಿಗೊಂಡಂ ॥

## ‘ಇ’ ವಿಭಾಗ

**VI. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **2X1=2**

14. ಸೀರೆಯವನು ಯಾವ ಯಾವ ಬಣ್ಣದ ಸೀರೆಗಳನ್ನು ತಂದಿದ್ದನು?
15. ತಂದೆ–ತಾಯಿ ನಾಗಿಯನ್ನು ಹೇಗೆ ಹುಡುಕಿದರು?

**VII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿರಿ.** **3X1=3**

16. “ಅಮ್ಮ ಎಷ್ಟು ಚೆಂದ ಬೆಕ್ಕು ನೋಡೆ ಇಲ್ಲಿ.”
17. ದೀಪ ನಿಲ್ಲಬಹುದೆ ಇಲ್ಲಿ ಗಾಳಿ ಬಂದು ಮುತ್ತಲು?

**VIII. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ.** **4X1=4**

18. ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.
19. ನಾಗಿಯ ಕಥೆ ಕವನದಲ್ಲಿಯ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.

ಪು.ತಿ.ನೋ.

## 'ಈ' ವಿಭಾಗ

**IX. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **2X1=2**

20. ರೈತನ ಗೆಳೆಯರು ಯಾರು?
21. ಮೂಡಣ ಮತ್ತು ಪಡುವಣದಲ್ಲಿ ಯಾರ್‍ಯಾರಿದ್ದಾರೆ?

**X. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ವಿವರಿಸಿರಿ.** **3X1=3**

22. ಹುಟ್ಟುಗುಣ ಸುಟ್ಟರೂ ಹೋಗುವುದೆ?
23. ಒಂದು ದಿನವಾದರೂ ವಿಶ್ರಾಂತಿ ಇರಲಿ.

**XI. ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿರಿ.** **4X1=4**

24. ಭೂದೇವಿಯ ಉಷಃಕಾಲದ ಚಿತ್ರಣವನ್ನು ಚಿತ್ರಿಸಿ.
25. ನೇಗಿಲ ಯೋಗಿಗೆ ಮುಕ್ತಿ ತೋರುವ ಹಾದಿ ಯಾವುದು? ವಿವರಿಸಿರಿ.

**XII. ಕೆಳಗಿನವುಗಳಲ್ಲಿ ಮೂರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ.** **2X3=6**

26. ಯಾವುದಾದರೂ ಎರಡು ಪದಗಳ ಅರ್ಥ ಬರೆಯಿರಿ : ಊರ್ವಿ, ಹೇವ, ಶರಭ.
27. ಯಾವುದಾದರೂ ಎರಡು ಪದಗಳ ಸಮಾನಾರ್ಥ ಬರೆಯಿರಿ : ಅಂಬರ ಮದನ, ತನು.
28. ಯಾವುದಾದರೂ ಎರಡು ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಬಳಸಿರಿ : ಮೃದುನುಡಿ, ಕಾಲಲೊದೆ, ಸಿಡಿಮಿಡಿ.
29. ಯಾವುದಾದರೂ ಎರಡು ಪದಗಳ ನಾನಾರ್ಥ ಬರೆಯಿರಿ : ಹರಿ, ನರ, ಮಣಿ.

## 'ಉ' ವಿಭಾಗ

**XIII. ಕೆಳಗೆ ಕೊಟ್ಟಿರುವ ಒಂದಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ :**

30. ಅಂಬರಭೂಷಣಮಾಲಾ **4X1=4**

ಡಂಬರದ ಬೆಡಂಗನಮರನರ್ತಕಿ ಗಡಮೇ
ನೆಂಬುದೊ ಧರಣೇಂದ್ರಂಗಮ
ಳುಂಬಂ ಪೊಗಟಲ್ಕೆ ರೂಪು ನೀಳಾಂಜನೆಯಾ

31. ಮಾಣದೆ ಮತ್ತೆಱಗಿದನಾ

ಸ್ಥಾಣುವನಬ್ಬರಿಸಿ ಸಿಡಿಲ ಮಾಱಕ್ಕಿಯೊಳಭವಂ
ಕಾಣುತದಂ ಸೈರಿಸುತಂ
ಕೇಣಂಬಡೆದೊತ್ತಿ ಮೆಟ್ಟಿದಂ ಗಾಂಡೀವಿಯಂ ॥

**XIV. ಕೆಳಗೆ ಕೊಟ್ಟಿರುವ ಹಳಗನ್ನಡವನ್ನು ಹೊಸಗನ್ನಡಕ್ಕೆ ಅನುವಾದಿಸಿರಿ :** **4X1=4**

32. ಎಂದು ಪಲವಂದದಿಂ ಪಲುಂಬಿ ವಿರೂಪಾಕ್ಷನುಪೇಕ್ಷೆಯಿಂದೀ ಪರಾಜಯಂ ತಗುಳ್ದುದೆಂದು ನಿಜಾಂತರಂಗದೊಳ್ ಬಗೆದು, ಕರುಣಾಬ್ಧಿಯಪ್ಪ ಶಂಕರನಂ ಕಿಂಕರತೆಯಿಂ ಸರಣ್ಬೊಕ್ಕು, ತತ್ಕಾರುಣ್ಯಂ ಬಡೆದು ಪಗೆಯಂ ಪರಾಭವಿಪೆನೆಂದು ಕೌಂತೇಯಂ ಚಿಂತಾಪಂಕಮಂ ವಿವೇಕ ಜಳದಿಂ ತೊಳೆದು ವಿಮಳ ಮನಸ್ಕನಾಗಿ.